ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜರ್ಮಿ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜರ್ಮಿಯನ್ನು		ಪರಾ.
				ಸ್ಥಳ.	ಎಕರೆ.	
2ರ ಪೈಕಿ ಸೋಜು ನಂಬರ್ 172	ಮೆಸ್ಟರ್ ಜೆ. ಜಿ. ಎಚ್ ಕ್ಯಾಫರ್ಡ್ಯಯವರು.	ದೊಡ್ಡಬಿಕ್ಕೋಡು ಗ್ರಾಮ.	ಉತ್ತರಕ್ಕೆ—ಸರ್ವೆ ನಂಬರು 7—8—9—10 ಮತ್ತು ಮಠ ದಕ್ಷಿಣಕ್ಕೆ—ಸರ್ವೆ 2ನೇ ನಂಬರು ಪೂರ್ವಕ್ಕೆ—ಸರ್ವೆ ನಂಬರು 88—1 ಪ್ಶ್ಚಿಮಕ್ಕೆ—ಸರ್ವೆ 2ನೇ ನಂಬರು ಪೈಕಿ.	ನಂ. 108—22 ಈ ನಂಬರಿನಲ್ಲಿ ಇದಾಗಲೇ ಜಾಯ್ದೆ ಪ್ರಕಾರ ಜರ್ಮಿ ಹಿಡುವಳಿದಾರನು ಬಿಟ್ಟು ಕೊಟ್ಟಿರುವ ಜರ್ಮಿ.		ಖಾಯಂದರ್—ಎಕರೆ 1 ಕ್ಕೆ 1—0—0 ಹಂಗಾಮಿ ದರ—ಡಿಟೋ. ಹೊರಾಜಿನಲ್ಲಿ ಪಡೆಯುವವರು ಸರ್ಕಾರಕ್ಕೆ ಕೊಡಬೇಕಾದ ಪಾಯಂ ದಾಖಲೆ ಪ್ರಕಾರ.

ತಿಳುವಳಿಕೆ ಪರಾ.—ಬಂದು ಸರ್ವೇ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಅಳತೆ ಪ್ರಕಾರ ಅಂದಾಜು ಎಕರೆ ಮೇಲೆ ಅಸ್ಸೆಟ್ಪೈಸ್ ವಸೂಲಾದ್ದರಲ್ಲಿ, ಕರಾರುವಾಕಾ ಮೋಜಿಣೀ ಎಕರಿಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಸ್ಸೆಟ್ಪೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡೆಯುವದಕ್ಕೇ ಆಗಲಿ ಜರ್ಮಿ ಹಿಡುವಳಿದಾರನು ಬದ್ಧ ವಾಗಿರಬೇಕು.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 18ನೇ ಮಾರ್ಚಿ 1896.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕಿದಾರರಾದ ಡಾಕ್ಟರ್ ಸಿಡ್ನಿಸ್ಮಿತ್ ಸಾಹೆಬರು ಮತ್ತು ಬಿ. ಎ. ಬ್ರಿಟೊ ಜಂಟಿದಾರರಿಂದ ವಸೂಲ್ ಮಾಡಬೇಕಾದ ಜರ್ಮಿ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಂಡು ಇಥೆಯಂತ ಹುಕ್ಕುಂ ಮಾಡಲ್ಪಟ್ಟ ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಕಚೇರಿಯಲ್ಲಿ ತಾಲ್ಲೂಕು ಅಮಲ್ದಾರ್ ಯಾ ತಿರಸ್ಕೇದಾರ್ ರೂಬರೂ ಸನ್ 1896ನೇ ಇಸವಿ ಮೇ 15ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ಆ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894–95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 288—1—1 ಮತ್ತು ಬಡ್ಡಿ ವಗೈರೆ ಇತರ ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದ್ದಾಗ್ಯೆ, ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟು ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಪಷ್ಟಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ವುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಪೀಲ್: ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಿ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಮಿಷ್ಕೀ ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.	ಜಮೀನು. ಆಕಾರ.	ಸರಕಾರಕ್ಕೆ ಬರಬೇಕಾದ ನೋಟಿಸ್ ಫೀ ಮತ್ತು ಸುಖವಾದ ಬಾಕಿ ಹೊಲಿಗಳು.
1	2	3	4	5	6	7	8	9	10	11
					ರೂ. ಆ. ಪೈ.			ಎ. ಗು.	ರೂ. ಆ. ಪೈ.	ರೂ. ಆ. ಪೈ.
ಚಿಕ್ಕ ಮಗಳೂರು.	ಜಾಗರ.	ನೆಲಿಗ ಹುಲುನಾಪಿ	ಡಾಕ್ಟರ್ ಸಿಡ್ನಿಸ್ಮಿತ್ ಸಾ ಹೆಬರು ಬಿ. ಎ. ಬ್ರಿಟೋ ಜಂಟಿ.			17	ಕಾಫೀ	79 12	119 0 0	288 1 1 ಮತ್ತು ಬಡ್ಡಿವಗ್ಗೆ ರ ಇತರರ

ಬಿ. ಜೆ. ಕೊಮಾರ್‌ಸಾಮಿ ನಾಯಕ್,
ಫಾರ್ ಡೆಪ್ಯುಟಿ ಕಮ್ಮಿಷನರ್.